**ಒಂದನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.**

**ಸಿ.ಸಿ.ಸಂಖ್ಯೆ.**1666/2022

ಫಿರ್ಯಾದುದಾರರುಃ ಸಿಂಗಟಗೆರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ ಃ ರವಿ

**ದೋಷಾರೋಪಣೆ**

**ಶ್ರೀ. ಅರವಿಂದ್ರ ಬಿ.ಸಿ, ಬಿ.ಎ.ಎಲ್.ಎಲ್.ಬಿ,** ಒಂದನೇ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಕಂಡ ಆರೋಪಿತರುಗಳಾದ,

ರವಿ, ಬಿನ್ ಚೆಲುವ ಮೂರ್ತಿ, 42 ವರ್ಷ,
ಕೂಲಿ ಕೆಲಸ, ವಾಸಃ ಸೋಮನಹಳ್ಳಿ ಗ್ರಾಮ,
ಸಿಂಗಟಗೆರೆ ಹೋಬಳಿ, ಕಡೂರು ತಾಲ್ಲೂಕು.

**ನಿಮ್ಮ ಮೇಲೆ ದೋಷಾರೋಪಣೆ ಹೊರಿಸುವುದೇನೆಂದರೆ,**

ದಿನಾಂಕಃ 29.01.2022 ರಂದು ಸಂಜೆ 6-00 ರ ಸಮಯದಲ್ಲಿ ಸಿಂಗಟಗೆರೆ ಠಾಣಾ ವ್ಯಾಪ್ತಿಯ ಸಿಂಗಟಗೆರೆ ಹೋಬಳಿ ಸೋಮನಹಳ್ಳಿ ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಅಂಗಡಿಯ ಮುಂದೆ 90 ಎಂ.ಎಲ್ ನ ಮದ್ಯ ತುಂಬಿದ 46 ರಾಜ ವಿಸ್ಕಿ ಮಧ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದೀರಿ. ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು 90 ಎಂ.ಎಲ್ ನ ಮದ್ಯ ತುಂಬಿದ 44 ರಾಜ ವಿಸ್ಕಿ ಮಧ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು

ಹೊಂದಿದ್ದೀರಿ. ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಈ ಮೇಲೆ ಹೇಳಿದ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು, ಈ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.)

ಸಹಿ/-
**ಒಂದನೇ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಕಡೂರು**

**ಒಂದನೇ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿ. ಸಿ. ಸಂಖ್ಯೆ.** 1666/2022

ಫಿರ್ಯಾದುದಾರರುಃ ಸಿಂಗಟಗೆರೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ ಃ ರವಿ

ಃಃ 1 **ನೇ ಆರೋಪಿ ಹೇಳಿಕೆ** ಃಃ

ಪ್ರಶ್ನೆ 1ಃ- ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು, ನಿಮಗೆ ಅರ್ಥವಾಯಿತೇ?

ಉತ್ತರಃ- **ಹೌದು**

ಪ್ರಶ್ನೆ 2ಃ- ನೀವು ಸದರಿ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ **ವಿಚಾರಣೆಯಾಗಬೇಕೆ?**

ಉತ್ತರಃ- **ಆರೋಪಗಳನ್ನು ಒಪ್ಪಿಕೊಳ್ಳುವುದಿಲ್ಲ, ವಿಚಾರಣೆಯಾಗಲಿ.**

(ದಿನಾಂಕಃ 05.01.2023 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ, ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

ಸಹಿ/-

1 **ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಃದಃನ್ಯಾಃದಂ.,ರವರು ಕಡೂರು.**